2017 ಕ.ತೀ.ವ 455

(ಕಲಬುರ್ಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಅಲ್ಲಾಬಕ್ಷ್ –ವಿರುದ್ಧ– ಕರ್ನಾಟಕ ರಾಜ್ಯ ಕೊಡೇಕಲ್ ಪೊಲೀಸ್ ಠಾಣೆ, ಕಲಬುರ್ಗಿ ಇವರ ಮುಖಾಂತರ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 482 ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಅರ್ಜಿದಾರರು ತಮ್ಮ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕ್ರಿಮಿನಲ್ ಪ್ರಕರಣದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 167(2)ರಡಿಯಲ್ಲಿ ಹೂಡಿದ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಕ್ರಿಮಿನಲ್ ಅರ್ಜಿ.

ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 167(2)(ii) ಉದ್ದೇಶಿಸಿದಂತೆ ತಮ್ಮ ಹಕ್ಕನ್ನು ಚಲಾಯಿಸಿರುವುದಿಲ್ಲ. ಅವರ ಮಧ್ಯಂತರ ಅರ್ಜಿಯು ಬಾಕಿಯಿರುವಾಗ ಮತ್ತು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನವೇ ಪ್ರಾಸಿಕ್ಯೂಷನ್ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದರಿಂದ ಅರ್ಜಿದಾರರಿಗೆ ಮಧ್ಯಂತರ ಜಾಮೀನು ಪಡೆಯುವ ನಿರುಪಾಧಿಕ ಹಕ್ಕು ಇರುವುದಿಲ್ಲವೆಂದು ಅಭಿಪ್ರಾಯ ಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (2015) 8 ಎಸ್‌ಸಿಸಿ 340<br>ರವಿ ಪ್ರಕಾಶ್ ಸಿಂಗ್ @ ಅರವಿಂದ್ ಸಿಂಗ್<br>–ವಿರುದ್ಧ– ಬಿಹಾರ್ ರಾಜ್ಯ<br>(ಕ್ರಿಮಿನಲ್ ಅಪೀಲು ಸಂಖ್ಯೆ 325/2015)* | *(ಉಲ್ಲೇ) 8* |

*ಕ್ರಿಮಿನಲ್ ಅರ್ಜಿ ಸಂಖ್ಯೆ: 201081/2016, ದಿನಾಂಕ: 8ನೇ ಡಿಸೆಂಬರ್, 2016.

2. *1995 ಎಸ್‌ಯುಪಿಪಿಎಲ್ (3) 221*
   *ಮಧ್ಯಪ್ರದೇಶ ಸರ್ಕಾರ*
   *–ವಿರುದ್ಧ– ರುಸ್ತುಮ್ ಮತ್ತು ಇತರರು (ಉಲ್ಲೇ) 8*
3. *2001 ಕ್ರಿಮಿನಲ್ ಎಲ್.ಜೆ 1832(1)*
   *ಉದಯ್ ಮೋಹನ್‌ಲಾಲ್ ಆಚಾರ್ಯ*
   *–ವಿರುದ್ಧ– ಮಹಾರಾಷ್ಟ್ರ ಸರ್ಕಾರ (ಉಲ್ಲೇ) 9*
4. *2002 ಕ್ರಿಮಿನಲ್ ಎಲ್.ಜೆ.575*
   *ಮಹಾರಾಷ್ಟ್ರ ಸರ್ಕಾರ –ವಿರುದ್ಧ–*
   *ಮೆ॥ ಭಾರತಿ ಚಂದಮಾಲ್ ವರ್ಮ*
   *@ ಆಯೆಷಾ ಖಾನ್ (ಉಲ್ಲೇ) 10*
5. *ಐಎಲ್‌ಆರ್ 2009 ಕೆಎಆರ್ 327*
   *ವಿಜಯ್ ಕುಮಾರ್ @ ಕಾವ್ಲಾ ಮತ್ತು ಇತರರು*
   *–ವಿರುದ್ಧ– ಆನೇಕಲ್ ಪೊಲೀಸರ ಮೂಲಕ ಸರ್ಕಾರ (ಉಲ್ಲೇ) 10*
6. *(2011) 10 ಎಸ್‌ಸಿಸಿ 445 2011(10) ಎಸ್‌ಸಿಸಿ 445*
   *ಪ್ರಜ್ಞಾ ಸಿಂಗ್ ಠಾಕೂರ್ –ವಿರುದ್ಧ–*
   *ಮಹಾರಾಷ್ಟ್ರ ಸರ್ಕಾರ (ಉಲ್ಲೇ) 11*

ಅರ್ಜಿದಾರರ ಪರ: ಶ್ರೀ ಎಸ್.ಎಸ್. ಅಸ್ಪಾಲಿ, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಪಿ.ಎಸ್. ಪಾಟೀಲ್, ಹೆಚ್‌ಸಿಜಿಪಿ.

## ಆಜ್ಞೆ

**ನ್ಯಾಯಮೂರ್ತಿ ಬಿ.ಎ. ಪಾಟೀಲ್ :**

ವಿಶೇಷ ಪ್ರಕರಣ ಸಂಖ್ಯೆ 56/2016ರಲ್ಲಿ ಯಾದಗಿರಿಯ ಮಾನ್ಯ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರು ಹೊರಡಿಸಿದ 12.08.2016ನೇ ದಿನಾಂಕದ ಆದೇಶವನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾರೆ.

2. ಗೌಡಪ್ಪ ಎಂಬ ಫಿರ್ಯಾದುದಾರರು ತಮ್ಮ ಸಹೋದರ ಗೋವಿಂದಪ್ಪ ದಿನಾಂಕ 01.05.2016ರಂದಿನಿಂದ ಕಾಣೆಯಾಗಿದ್ದರೆಂದು ಪೊಲೀಸರಿಗೆ ದಿನಾಂಕ 14.05.2016ರಂದು ದೂರನ್ನು ನೀಡಿರುತ್ತಾರೆ. ದಿನಾಂಕ 13.05.2016ರಂದು ಫಿರ್ಯಾದುದಾರ ಹಾಗೂ ಅವರ ಕುಟುಂಬದ ಇತರೆ ಸದಸ್ಯರು ಕುಳಿತಿದ್ದ ಸಮಯದಲ್ಲಿ ಫಿಯಾರ್ದುದಾರರ ಸಂಬಂಧಿಕರಾಗಿರುವ ಮಂಜುನಾಥ ಎಂಬುವವರು ಮನೆಗೆ ಬಂದು, ತಾನು ಹಾಗೂ ಅಲ್ಲಾಬಕ್ಷ (ಅರ್ಜಿದಾರ) ಹನುಮಂತ ದೇವಾಲಯದ ಕಟ್ಟೆಯ ಮೇಲೆ ಕುಳಿತ್ತಿದ್ದಾಗ, ಅಲ್ಲಾಬಕ್ಷನ ಜಮೀನಿಗೆ ಹೋಗುತ್ತಿದ್ದ ಶ್ರೀಮತಿ ಮಲ್ಲಮ್ಮಳೊಂದಿಗೆ ಅವನು ಅನೈತಿಕ ಸಂಬಂಧ ಹೊಂದಿದ್ದನಂತೆ, ಇದು ಮಲ್ಲಮ್ಮನ ಪತಿಗೆ ತಿಳಿದು, ಅವನು ಮಲ್ಲಮ್ಮಳಿಗೆ ಹೊಡೆದುಬಡಿದು ಮಾಡುತ್ತಿದ್ದನೆಂದು ಆಕೆ ಅಲ್ಲಾಬಕ್ಷನಿಗೆ ತಿಳಿಸಿದಾಗ ಅವನನ್ನು ಮುಗಿಸಲು ತೀರ್ಮಾನಿಸಿ, ಎ–2 ನೊಂದಿಗೆ ಮೃತ ಗೋವಿಂದಪ್ಪನನ್ನು ಅಲ್ಲಾಬಕ್ಷ ತನ್ನ ಜಮೀನಿಗೆ ಎಳೆದುಕೊಂಡುಹೋಗಿ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿ, ಆ ತರುವಾಯ ವಿಷಯವನ್ನು ಶ್ರೀಮತಿ ಮಲ್ಲಮ್ಮಳಿಗೂ ತಿಳಿಸಿದ್ದಾಗಿ ಹೇಳಿದನೆಂದು ತಿಳಿಸಿದನು. ಆ ಮಾಹಿತಿಯ ಆಧಾರದ ಮೇಲೆ ಫಿರ್ಯಾದುದಾರ ಪೊಲೀಸ್ ಠಾಣೆಗೆ ತೆರಳಿ, ದೂರನ್ನು ಸಲ್ಲಿಸಿದನು. ಆ ದೂರಿನ ಆಧಾರದ ಮೇಲೆ ದಿನಾಂಕ 14.5.2016ರಂದು ಕ್ರೈಂ ಸಂಖ್ಯೆ 24/2016ರಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಯಿತು, ತನಿಖೆಯ ಅವಧಿಯಲ್ಲಿ, ಆಪಾದಿತನನ್ನು ಶಂಕಿಸಿ ಅಭಿರಕ್ಷೆಯಲ್ಲಿರಿಸಲಾಯಿತು. ದಿನಾಂಕ 12.08.2016ರಂದು, ಆಪಾದಿತ ವ್ಯಕ್ತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಆಪಾದಿತ ಸಂ.1 ಅಲ್ಲಾಬಕ್ಷನ ಪರವಾಗಿ ಅದೇ ದಿನದಂದು, ದಿನಾಂಕ 14.05.2016ರಂದು ಅಧೀನ ನ್ಯಾಯಾಲಯದ ಎದುರು ಅರ್ಜಿದಾರನನ್ನು ಹಾಜರುಪಡಿಸಿದ್ದು, ಅದೇ ದಿನ ನ್ಯಾಯಿಕ ಅಭಿರಕ್ಷೆಗೆ ಸಂಬಂಧಿಸಿದಂತೆ ಪುನರ್ವಿಚಾರಣೆಗೆ ಹಿಂದಕ್ಕೆ ಕಳುಹಿಸಲಾಗಿರುತ್ತದೆ. ದಿನಾಂಕ 11.08.2016ರ ವರೆಗೂ ಕೊಡೆಕಲ್ ಪೊಲೀಸರು ಆರೋಪಪಟ್ಟಿಯನ್ನು ಸಲ್ಲಿಸಿರುವುದಿಲ್ಲ. 90 ದಿನಗಳ ಒಳಗೆ ಆರೋಪಪಟ್ಟಿಯನ್ನು ಸಲ್ಲಿಸದಿರುವುದರಿಂದ, ಅರ್ಜಿದಾರ – ಆಪಾದಿತ ಸಂ.1 ಶಾಸನಾತ್ಮಕ ಜಾಮೀನಿನ ಮೇಲೆ ಬಿಡುಗಡೆ ಹೊಂದಲು ಹಕ್ಕುಳವನಾಗಿರುತ್ತಾನೆಂಬ ಆಧಾರದ ಮೇಲೆ ಶಾಸನಾತ್ಮಕ ಜಾಮೀನಿನ ಅನುದಾನಕ್ಕೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167(2)ನೇ ಪ್ರಕರಣದಡಿಯಲ್ಲಿ

ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. ಆಪಾದಿತನ ಪರ ಮಾನ್ಯ ವಕೀಲರು ಹಾಗೂ ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದವನ್ನು ಆಲಿಸಿದ ತರುವಾಯ, ಅಧೀನ ನ್ಯಾಯಾಲಯವು, ದಿನಾಂಕ 12.08.2016ನೇ ದಿನಾಂಕದ ಆದೇಶದ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 167(2)ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಯಿತು. ಇದನ್ನು ರದ್ದುಪಡಿಸಲು ಅರ್ಜಿದಾರರು ಪ್ರಸ್ತುತ ಈ ನ್ಯಾಯಾಲಯದ ಎದುರು ಅರ್ಜಿ ಸಲ್ಲಿಸಿರುತ್ತಾರೆ.

3. ಅರ್ಜಿದಾರರ ಪರ ಮಾನ್ಯ ವಕೀಲರ ಹಾಗೂ ರಾಜ್ಯದ ಪರ ಮಾನ್ಯ ಹೆಚ್‌ಸಿಜಿಪಿಯವರುಗಳ ಅಹವಾಲನ್ನು ನಾನು ಆಲಿಸಿರುತ್ತೇನೆ.

4. ಅರ್ಜಿದಾರರ ಪರ ಮಾನ್ಯ ವಕೀಲರು, ಅಧಿವಿಚಾರಣಾ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167(2)ನೇ ಪ್ರಕರಣದ ಉಪಬಂಧವನ್ನು ಸರಿಯಾಗಿ ಗಮನಿಸದೆ ಪ್ರಶ್ನಿತ ಆದೇಶವನ್ನು ಹೊರಡಿಸಿದೆಯೆಂದು ಬಲವಾಗಿ ವಾದಿಸಿರುತ್ತಾರೆ. ಮುಂದುವರೆದು, ದಿನಾಂಕ 14.05.2016ರಂದು ಆಪಾದಿತನನ್ನು ಅಧೀನ ನ್ಯಾಯಾಲಯದ ಎದುರು ಹಾಜರುಪಡಿಸಿ ಬಂಧನಕ್ಕೆ ಕಳುಹಿಸಲಾಯಿತೆಂದು ವಾದಿಸಲಾಗಿರುತ್ತದೆ. ಸದರಿ ದಿನದಿಂದ, ದಿನಾಂಕ 11.08.2016ಕ್ಕೆ 90 ದಿನಗಳಾಗುತ್ತಿತ್ತು. ಆ ದಿನಾಂಕಕ್ಕೆ ಮುಂಚೆ, ತನಿಖಾಧಿಕಾರಿಯು ಆರೋಪ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಇದರಿಂದಾಗಿ ದಿನಾಂಕ 12.08.2016ರಂದು ಶಾಸನಾತ್ಮಕ ಜಾಮೀನಿನ ಮೇಲೆ ಆಪಾದಿತರನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದಡಿಯಲ್ಲಿ ಜಾಮೀನು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆಂದೂ ವಾದಿಸಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣವು ಜಾಮೀನಿಗೆ ಸಂಬಂಧಿಸಿದಂತೆ ಆಪಾದಿತರಿಗೆ ಹಕ್ಕನ್ನು ನೀಡುತ್ತದೆ ಮತ್ತು ಸದರಿ ಹಕ್ಕು ಸ್ವರೂಪದಲ್ಲಿ ಆಜ್ಞಾಪಕವಾಗಿದ್ದು ರದ್ದುಪಡಿಸಲಾಗದ ಹಕ್ಕಾಗಿದ್ದು, ನ್ಯಾಯಾಲಯಕ್ಕೆ ಆಪಾದಿತನು ಜಾಮೀನು ಅರ್ಜಿಯನ್ನು ಸಲ್ಲಿಸಿ, ಜಾಮೀನನ್ನು ಕೋರಿದ್ದಲ್ಲಿ ಆತನನ್ನು ಬಿಡುಗಡೆ ಮಾಡುವುದನ್ನು ಹೊರತುಪಡಿಸಿ ಬೇರ್‍ಯಾವುದೇ ಅವಕಾಶವಿರುವುದಿಲ್ಲವೆಂದೂ ವಾದಿಸಿರುತ್ತಾರೆ. ಮುಂದುವರೆದು,

ಅಧಿವಿಚಾರಣಾ ನ್ಯಾಯಾಲಯವು, ರದ್ದುಪಡಿಸಬಹುದಾದ ತೀರ್ಮಾನವನ್ನು ಉದಾಹರಿಸುವ ಮೂಲಕ ಅರ್ಜಿಯನ್ನು ತಪ್ಪಾಗಿ ವಜಾಗೊಳಿಸಿದ್ದು, ಇದು ರದ್ದುಪಡಿಸಲು ತಕ್ಕದ್ದಾಗಿದೆಯೆಂದು ವಾದಿಸಿರುತ್ತಾರೆ. ಅಂಥ ವಾದದ ಮೇಲೆ, ಅರ್ಜಿಯನ್ನು ಅಂಗೀಕರಿಸಲು ಇವರು ಕೋರಿರುತ್ತಾರೆ.

5. ಇದಕ್ಕೆ ವಿರುದ್ಧವಾಗಿ, ಮಾನ್ಯ ಹೆಚ್‌ಸಿಜಿಪಿ ರವರು, ದಂಡ ಪ್ರಕ್ರಿಯಾ ಸಂಹಿತೆಯ 167(2)ನೇ ಪ್ರಕರಣದಡಿಯಲ್ಲಿನ ಹಕ್ಕು ರದ್ದು ಪಡಿಸಲಾಗುವುದಿಲ್ಲವಾದ್ದರಿಂದ, ಒಮ್ಮೆ ಆರೋಪಪಟ್ಟಿಯನ್ನು ಸಲ್ಲಿಸಿದರೆ, ಗುಣಾರ್ಹತೆಗಳ ಆಧಾರದ ಮೇಲೆ ಜಾಮೀನನ್ನು ಕ್ಲೇಮು ಮಾಡಬೇಕಾಗಿರುತ್ತದೆಂದು ವಾದಿಸಿರುತ್ತಾರೆ. ಮುಂದುವರೆದು, ಆಪಾದಿತನನ್ನು ಹಾಜರುಪಡಿಸಿ, ಪುನರ್ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಿದ ದಿನವನ್ನು ಹೊರತುಪಡಿಸಬೇಕಾಗಿದ್ದು, ಒಂದುವೇಳೆ ಹೊರತುಪಡಿಸಬೇಕಾಗಿರುವ ದಿನವನ್ನೂ ಪರಿಗಣನೆಗೆ ತೆಗೆದುಕೊಂಡಲ್ಲಿ, ಆರೋಪ ಪಟ್ಟಿಯನ್ನು 90 ದಿನಗಳೊಳಗೆ ಸಲ್ಲಿಸತಕ್ಕದ್ದಾಗಿರುತ್ತದೆಂದು ವಾದಿಸಿರುತ್ತಾರೆ. ವಿಷಯದ ಆ ಹಿನ್ನೆಲೆಯಲ್ಲಿ, ಅರ್ಜಿದಾರ ಆಪಾದಿತರು ಯಾವುದೇ ಶಾಸನಾತ್ಮಕ ಜಾಮೀನಿಗೆ ಹಕ್ಕುಳ್ಳವರಾಗಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು ಆ ಎಲ್ಲಾ ಆಯಾಮಗಳನ್ನು ಪರಿಗಣಿಸಿದ ತರುವಾಯ, ಅರ್ಜಿಯನ್ನು ಸರಿಯಾಗಿಯೇ ವಜಾಗೊಳಿಸಿದೆ, ಹಾಗಾಗಿ, ಪ್ರಶ್ನಿತ ಆದೇಶದಲ್ಲಿ ಯಾವುದೇ ಹಸ್ತಕ್ಷೇಪವು ಅಗತ್ಯವಿಲ್ಲವೆಂದು ನಿವೇದಿಸಿದ್ದಾರೆ.

6. ಮೇಲಿನ ನಿವೇದನೆಯನ್ನು ಗಮನದಲ್ಲಿಟ್ಟುಕೊಂಡು, ನಾನು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶ ಕಾನೂನಿನಲ್ಲಿ ಊರ್ಜಿತವಾದುದಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸಬೇಕಿದೆ.

7. ಸ್ಪಷ್ಟತೆಯ ಉದ್ದೇಶಕ್ಕಾಗಿ, ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣವನ್ನು ಉದ್ಧರಿಸಲು ನಾನು ಇಚ್ಛಿಸುತ್ತೇನೆ. ಅದು ಈ ಮುಂದಿನಂತಿದೆ:

*"**167(2)ನೇ ಪ್ರಕರಣ:** ಈ ಪ್ರಕರಣದ ಮೇರೆಗೆ ಆಪಾದಿತ ವ್ಯಕ್ತಿಯನ್ನು ಯಾರ ಬಳಿಗೆ ಕಳಿಸಲಾಯಿತೋ ಆ ಮ್ಯಾಜಿಸ್ಟ್ರೇಟನು, ಅವನು ಮೊಕದ್ದಮೆಯನ್ನು ವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರಲಿ, ಇಲ್ಲದಿರಲಿ, ಕಾಲಕಾಲಕ್ಕೆ ಅಂತಹ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಆಲೋಚಿಸುವಂತಹ ಅಭಿರಕ್ಷೆಯಲ್ಲಿ ಒಟ್ಟಿನಲ್ಲಿ ಹದಿನೈದು ದಿನಗಳು ಮೀರದ ಅವಧಿಯವರೆಗೆ ಆಪಾದಿತನನ್ನು ಅಭಿರಕ್ಷೆಯಲ್ಲಿಟ್ಟು ಕೊಂಡಿರಲು ಅಧಿಕೃತಗೊಳಿಸಬಹುದು; ಮತ್ತು ಅವನು ಮೊಕದ್ದಮೆಯನ್ನು ವಿಚಾರಿಸಲು ಅಥವಾ ಅದನ್ನು ಆರೋಪ ವಿಚಾರಣೆಗೆ ಒಪ್ಪಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರದಿದ್ದರೆ, ಮತ್ತಷ್ಟು ಕಾಲ ಬಂಧನದಲ್ಲಿರಿಸುವುದು ಅನವಶ್ಯವೆಂದು ಪರ್ಯಾಲೋಚಿಸಿದರೆ ಅವನು ಆಪಾದಿತ ವ್ಯಕ್ತಿಯನ್ನು, ಅಂತಹ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಬ್ಬ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸಿಕೊಡಲು ಆದೇಶಿಸಬಹುದು:*

*ಪರಂತು,*

*(ಎ) ಮ್ಯಾಜಿಸ್ಟ್ರೇಟನು, ಪೊಲೀಸರ ಅಭಿರಕ್ಷೆಯಲ್ಲಿರುವುದನ್ನು ಹೊರತುಪಡಿಸಿ ಆಪಾದಿತ ವ್ಯಕ್ತಿಯ ಇತರ ಬಂಧನವನ್ನು, ಮ್ಯಾಜಿಸ್ಟ್ರೇಟನು ಹಾಗೆ ಮಾಡುವುದಕ್ಕಾಗಿ, ಸಾಕಷ್ಟು ಕಾರಣಗಳು ಇವೆ ಎಂದು ಅವನಿಗೆ ಮನದಟ್ಟಾದರೆ, ಹದಿನೈದು ದಿವಸಗಳ ಅವಧಿಗೂ ಮೀರಿ ಅಧಿಕೃತಗೊಳಿಸಬಹುದು. ಆದರೆ, ಈ ಪ್ಯಾರಾದ ಮೇರೆಗೆ, ಅಭಿರಕ್ಷೆಯಲ್ಲಿರುವ ಆಪಾದಿತ ವ್ಯಕ್ತಿಯ ಬಂಧನವನ್ನು;*

*(i) ಮರಣ, ಆಜೀವ ಕಾರಾವಾಸ ಅಥವಾ ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯ ಕಾರಾವಾಸದೊಂದಿಗೆ ದಂಡನೀಯವಾದ ಅಪರಾಧಕ್ಕೆ ತನಿಖೆಯು ಸಂಬಂಧ ಪಡುವಲ್ಲಿ ತೊಂಭತ್ತು ದಿನಗಳು,*

*(ii) ಇತರೆ ಯಾವುದೇ ಅಪರಾಧಕ್ಕೆ ತನಿಖೆಯು ಸಂಬಂಧಪಡುವಲ್ಲಿ ಅರವತ್ತು ದಿವಸಗಳು ಮೀರದ ಒಟ್ಟು ಅವಧಿಗಾಗಿ ಯಾವನೇ ಮ್ಯಾಜಿಸ್ಟ್ರೇಟನು ಅಧಿಕೃತಗೊಳಿಸತಕ್ಕದ್ದಲ್ಲ. ಸಂದರ್ಭಾನುಸಾರ, ತೊಂಭತ್ತು ದಿವಸಗಳು ಅಥವಾ ಅರವತ್ತು ದಿವಸಗಳ ಅವಧಿಯು ಮುಕ್ತಾಯವಾದ ಮೇಲೆ, ಆಪಾದಿತ ವ್ಯಕ್ತಿಯನ್ನು, ಅವನು ಒಪ್ಪಿ ಜಾಮೀನನ್ನು ಒದಗಿಸಲು ಸಿದ್ಧನಿದ್ದರೆ ಮತ್ತು ಅದನ್ನು ಒದಗಿಸಿದರೆ, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು ಮತ್ತು ಈ ಉಪ–ಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯನ್ನು XXXIIIನೇ ಅಧ್ಯಾಯದ ಉಪಬಂಧಗಳ ಮೇರೆಗೆ, ಅಧ್ಯಾಯದ ಉದ್ದೇಶಗಳಿಗಾಗಿ ಹಾಗೆ ಬಿಡುಗಡೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು;*

*(ಬಿ) ಆಪಾದಿತನನ್ನು ತನ್ನ ಮುಂದೆ ಹಾಜರುಪಡಿಸಿದಲ್ಲದೆ ಯಾವ ಮ್ಯಾಜಿಸ್ಟ್ರೇಟನೂ ಈ ಪ್ರಕರಣದ ಮೇರೆಗೆ ಯಾವುದೇ ಅಭಿರಕ್ಷೆಯಲ್ಲಿ ಬಂಧನದಲ್ಲಿರಿಸುವುದನ್ನು ಪ್ರಾಧಿಕೃತಗೊಳಿಸತಕ್ಕದ್ದಲ್ಲ;*

*(ಸಿ) ಈ ಬಗ್ಗೆ ಉಚ್ಚ ನ್ಯಾಯಾಲಯುವು ವಿಶೇಷವಾಗಿ ಶಕ್ತಗೊಳಿಸಿರದ ಎರಡನೇ ವರ್ಗದ ಯಾವ ಮ್ಯಾಜಿಸ್ಟ್ರೇಟನೂ ಪೊಲೀಸರ ಅಭಿರಕ್ಷೆಯಲ್ಲಿನ ಬಂಧನವನ್ನು ಪ್ರಾಧಿಕೃತಗೊಳಿಸತಕ್ಕದ್ದಲ್ಲ.*

***ವಿವರಣೆ I** : ಸಂದೇಹಗಳ ನಿವಾರಣೆಗಾಗಿ, (ಎ) ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗಿದ್ದಾಗ್ಯೂ, ಆಪಾದಿತನು,*

*ಅವನು ಜಾಮೀನು ಕೊಡದಿರುವವರೆಗೆ, ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟಿರತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.*

***ವಿವರಣೆ II*** *: (ಬಿ) ವಾಕ್ಯ ವೃಂದದ ಮೇರೆಗೆ ಅಗತ್ಯಪಡಿಸಲಾದಂತೆ ಒಬ್ಬ ಆಪಾದಿತ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲಾಗಿದ್ದಿತೆ ಇಲ್ಲವೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಬಂಧನವನ್ನು ಪ್ರಾಧಿಕೃತಗೊಳಿಸುವ ಆದೇಶದ ಮೇಲಿರುವ ಅವನ ಸಹಿಯಿಂದ ಆಪಾದಿತನ ಹಾಜರಾತಿಯನ್ನು ರುಜುವಾತುಪಡಿಸಬಹುದು.*

*ಮತ್ತು ಪರಂತು ಹದಿನೆಂಟು ವರ್ಷ ವಯಸ್ಸಿಗಿಂತ ಕಡಿಮೆಯಿರುವ ಮಹಿಳೆಯರ ಸಂದರ್ಭದಲ್ಲಿ, ಬಂಧನವನ್ನು ರಿಮ್ಯಾಂಡ್ ಹೋಮ್ ಅಥವಾ ಮಾನ್ಯತೆ ಪಡೆದ ಸಾಮಾಜಿಕ ಸಂಸ್ಥೆಯ ಅಭಿರಕ್ಷೆಯಲ್ಲಿರಬೇಕೆಂದು ಅಧಿಕೃತಗೊಳಿಸತಕ್ಕದ್ದು.*

8. ಮೇಲೆ ಹೇಳಿದ ಕಾನೂನಿನ ಉಪಬಂಧವು, ಅಭಿರಕ್ಷೆಗೆ ಆಪಾದಿತನನ್ನು ಪುನರ್ವಿಚಾರಣೆಗೆ ಹಿಂದಕ್ಕೆ ಕಳುಹಿಸುವ ಮಾನ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಧಿಕಾರದ ಬಗ್ಗೆ ವ್ಯವಹರಿಸುತ್ತದೆಂಬುದು ಸ್ಪಷ್ಟವಾಗಿದೆ. ಆದಾಗ್ಯೂ, 90 ದಿನಗಳ ಪರಿಮಿತಿಯು ನಿಗದಿತವಾಗಿರುತ್ತದೆ. ಇದರಂತೆ, ಪುನರ್ವಿಚಾರಣೆಗೆ ಹಿಂದಕ್ಕೆ ಕಳುಹಿಸುವ ಮೊದಲ ಆದೇಶದಿಂದ 90 ದಿನಗಳೊಳಗೆ, ಆರೋಪಪಟ್ಟಿಯನ್ನು ಸಲ್ಲಿಸಿದಲ್ಲಿ, ಜಾಮೀನಿನ ಮೇಲೆ ಆಪಾದಿತನನ್ನು ಬಿಡುಗಡೆಗೊಳಿಸಲು ಮಾನ್ಯ ಮ್ಯಾಜಿಸ್ಟ್ರೇಟರನ್ನು ಅಧಿಕೃತಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವನ್ನು ಗಮನಿಸಿದಾಗ, ***ರವಿ ಪ್ರಕಾಶ್ ಸಿಂಗ್ @ ಅರವಿಂದ್ ಸಿಂಗ್ –ವಿರುದ್ಧ– ಬಿಹಾರ್ ರಾಜ್ಯ (ಕ್ರಿಮಿನಲ್ ಅಪೀಲು ಸಂಖ್ಯೆ 325/2015)***[1], ಪ್ರಕರಣದಲ್ಲಿ 20.2.2015ರ ದಿನಾಂಕದ ತೀರ್ಪನ್ನು ಉಲ್ಲೇಖಿಸುವ ಮೂಲಕ ವರದಿಯಾದ

1. (2015) 8 ಎಸ್‌ಸಿಸಿ 340

***ಮಧ್ಯಪ್ರದೇಶ ಸರ್ಕಾರ –ವಿರುದ್ಧ– ರುಸ್ತಮ್ ಮತ್ತು ಇತರರು*** [2], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ 90 ದಿನಗಳನ್ನು ಲೆಕ್ಕಹಾಕುವಾಗ ಪುನರ್ವಿಚಾರಣೆಗೆ ಹಿಂದಕ್ಕೆ ಕಳುಹಿಸಿದ ದಿನವನ್ನು ಹೊರತುಪಡಿಸಬೇಕೆಂಬ ತೀರ್ಮಾನಕ್ಕೆ ಬಂದಿರುವುದು, ನಿರೂಪಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನ್ಯಾಯಾಲಯವು, 90 ದಿನಗಳ ಒಳಗೆ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, ಆರೋಪಿಯು ಜಾಮೀನಿಗೆ ಹಕ್ಕುಳ್ಳವನಾಗಿರುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿರುತ್ತದೆ.

9. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ***ರುಸ್ತುಂ***ರವರ (ಹಿಂದೆ ಹೇಳಿದ) ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ರದ್ದುಪಡಿಸಿರುವುದನ್ನು ವರದಿಯಾದ ***ಉದಯ್ ಮೋಹನ್‌ಲಾಲ್ ಆಚಾರ್ಯ –ವಿರುದ್ಧ– ಮಹಾರಾಷ್ಟ್ರ ಸರ್ಕಾರ*** [3], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು ಅಂಥ ತೀರ್ಪನ್ನು ಉದಾಹರಿಸಿ ಜಾಮೀನಿಗೆ ಸಂಬಂಧಿಸಿದ ಅರ್ಜಿಯನ್ನು ವಜಾ ಮಾಡಿರುತ್ತದೆ.

10. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದ ಎಚ್ಚರಿಕೆಯ ಓದಿನಿಂದ ವರದಿಯಾದ ***ಮಹಾರಾಷ್ಟ್ರ ಸರ್ಕಾರ –ವಿರುದ್ಧ– ಮೆ॥ ಭಾರತಿ ಚಂದಮಾಲ್ ವರ್ಮ @ ಆಯೆಷಾ ಖಾನ್*** [4],ಪ್ರಕರಣದಲ್ಲಿ ಹಾಗೂ ವರದಿಯಾದ ***ವಿಜಯ್ ಕುಮಾರ್ @ ಕಾವ್ಲಾ ಮತ್ತು ಇತರರು –ವಿರುದ್ಧ– ಆನೇಕಲ್ ಪೋಲೀಸರ ಮೂಲಕ ಸರ್ಕಾರ*** [5], ಪ್ರಕರಣದಲ್ಲಿನ ತೀರ್ಪಿನ ಹಿನ್ನೆಲೆಯಲ್ಲಿ, ತನಿಖಾ ಏಜೆನ್ಸಿಯ ಮೂಲಕ 90 ದಿವಸಗಳ ಒಳಗೆ ಆರೋಪಪಟ್ಟಿಯನ್ನು ಸಲ್ಲಿಸದಿದ್ದಲ್ಲಿ, ಆಪಾದಿತ ಶಾಸನಾತ್ಮಕ ಜಾಮೀನಿಗೆ ಹಕ್ಕುಳ್ಳವನಾಗಿರುತ್ತಾನೆ. ಅಂಥ ಹಕ್ಕು ರದ್ದುಮಾಡಬಹುದಾಗಿದ್ದಾಗ್ಯೂ, ಸದರಿ ಹಕ್ಕು ಆಜ್ಞಾಪಕ ಸ್ವರೂಪದ್ದಾಗಿರುತ್ತದೆ. ಆದರೆ, ಆಪಾದಿತ ಜಾಮೀನಿಗೆ ಅರ್ಜಿ ಸಲ್ಲಿಸಬೇಕಾಗಿದ್ದು, ಆಪಾದಿತರ ಬಿಡುಗಡೆಯು ಸ್ವಯಂಚಾಲಿತವಾಗಿರುವುದಿಲ್ಲ. ಆ ಹಿನ್ನಲೆಯಲ್ಲಿ, ದಾಖಲೆಗಳನ್ನು ಪರಿಶೀಲಿಸಿದ ಮೇಲೆ ಆಪಾದಿತನನ್ನು ಹಾಜರುಪಡಿಸಿದಂಥ ದಿನಾಂಕವು 14.05.2016 ಆಗಿದ್ದು, ಹಾಜರುಪಡಿಸಿದ ತರುವಾಯ,

2. 1995 ಎಸ್‌ಯುಪಿಪಿಎಲ್ 221

3. 2001 ಕ್ರಿಮಿನಲ್ ಎಲ್.ಜೆ 1832(1)

4. 2002 ಕ್ರಿಮಿನಲ್ ಎಲ್.ಜೆ.575

5. ಐಎಲ್‌ಆರ್ 2009 ಕೆಎಆರ್ 327

ಆಪಾದಿತನನ್ನು ಪುನರ್ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಲಾಯಿತು. ಆ ದಿನಾಂಕದಿಂದ 90 ದಿನಗಳ ಅವಧಿಯು 11.8.2016ಕ್ಕೆ ಆಗುತ್ತಿತ್ತೆಂಬುದು ತಿಳಿದು ಬಂದಿದೆ.

11. ಉದ್ಧರಿತ ತೀರ್ಪುಗಳಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ಉದಾಹರಿಸುವ ಮೂಲಕ, ಪ್ರತ್ಯರ್ಜಿದಾರರು ವಿವಿಧ ವಾದಗಳನ್ನು ಮಾಡಿದ್ದಾಗ್ಯೂ, 90 ದಿನಗಳನ್ನು ಲೆಕ್ಕ ಹಾಕುವಾಗ ಮೊದಲು ಬಂಧನಕ್ಕೆ ಕಳುಹಿಸಿದ ದಿನವನ್ನು ಹೊರತುಪಡಿಸಬೇಕಾಗಿರುತ್ತದೆ. ಮತ್ತೊಂದು ಕಡೆ ಅರ್ಜಿದಾರರು, ಬಂಧನಕ್ಕೆ ಕಳುಹಿಸಿದ ದಿನವನ್ನು ಸೇರಿಸಿಕೊಳ್ಳಬೇಕೆಂದು ವಾದಿಸಿರುತ್ತಾರೆ. ಆ ವಾದಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ವಿವಾದಾಂಶವು, ಈ ಪ್ರಕರಣದಲ್ಲಿ ಒಳಗೊಳ್ಳದಿರುವುದರಿಂದ, ಪ್ರಸ್ತುತ ಪ್ರಕರಣಕ್ಕೆ ಉದ್ಧರಿತ ಭಾಗಗಳು ಅನ್ವಯವಾಗುವುದಿಲ್ಲಾ, ಬಂಧನಕ್ಕೆ ಕಳುಹಿಸಿದ ದಿನವನ್ನು ಸೇರಿಸಿಕೊಳ್ಳಬೇಕೆ ಅಥವಾ ಬಿಟ್ಟು ಬಿಡಬೇಕೆ ಎಂಬ ವಾಸ್ತವಾಂಶಗಳನ್ನು ನಾವು ಗಮನಸಿದಲ್ಲಿ, ದಿನಾಂಕ 11.08.2016ರಂದು ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದಡಿಯಲ್ಲಿ ಆಪಾದಿತನು ಅರ್ಜಿಯನ್ನು ಸಲ್ಲಿಸಲಿಲ್ಲ ಎಂಬ ಕಾರಣವು ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ. ಆತ ಅಂಥ ಅರ್ಜಿಯನ್ನು ದಿನಾಂಕ 12.08.2016ರಂದು ಸಲ್ಲಿಸಿರುತ್ತಾನೆ. ದಿನಾಂಕ 12.08.2016ರ ಆದೇಶ ಪತ್ರವು ಎ–1 ಹಾಗೂ ಎ–2ಗಳನ್ನು ನ್ಯಾಯಾಲಯದ ಎದುರು ಹಾಜರುಪಡಿಸಿದ್ದು, ದಂಡ ಪ್ರಕ್ರಿಯಾ ಸಂಹಿತೆಯ 167(2)ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಆರೋಪಪಟ್ಟಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ಪ್ರಕರಣವನ್ನು ಈಗಾಗಲೇ ಸಲ್ಲಿಸಲಾಗಿದೆಯೆಂಬುದನ್ನು ಬಹಿರಂಗಪಡಿಸುತ್ತದೆ. ಆ ಹಿನ್ನೆಲೆಯಲ್ಲಿ, ಎರಡೂ ಕ್ರಿಯೆಗಳು ಏಕಕಾಲಕ್ಕೆ ಘಟಿಸಿರುತ್ತವೆ. ಆಪಾದಿತನು ಅರ್ಜಿಯನ್ನು ಸಲ್ಲಿಸುವ ಮೊದಲು ಆರೋಪಪಟ್ಟಿಯನ್ನು ಸಲ್ಲಿಸಲಾಯಿತೆ ಅಥವಾ ಆರೋಪಪಟ್ಟಿಯನ್ನು ಸಲ್ಲಿಸುವ ಮೊದಲು ಅರ್ಜಿಯನ್ನು ಸಲ್ಲಿಸಲಾಯಿತೆ ಎಂಬುದು ಈ ನ್ಯಾಯಾಲಯದ ಮುಂದೆ ಬರುವಂತ ವಿಚಾರವೇ ಆಗಿರುವುದಿಲ್ಲ. ಈ ಹಿನ್ನೆಲೆಯುಲ್ಲಿ, ಆರೋಪಪಟ್ಟಿಯುನ್ನು ಈಗಾಗಲೇ ಸಲ್ಲಿಸಲಾಗಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯಕ್ಕೆ, ವರದಿ ಮಾಡಿದ

***ಪ್ರಜ್ಞಾ ಸಿಂಗ್ ಠಾಕೂರ್ -ವಿರುದ್ಧ- ಮಹಾರಾಷ್ಟ್ರ***[6], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಟ್ಟಿರುವ ಅಭಿಪ್ರಾಯವನ್ನು ಪರಿಗಣಿಸಬೇಕಾದ ಅವಕಾಶವಿರುತ್ತದೆಯೇ ಹೊರತು ಬೇರೆ ಯಾವುದೇ ಅವಕಾಶವಿರುವುದಿಲ್ಲ.

12. ಪ್ರಸ್ತುತ ಪ್ರಕರಣದಲ್ಲಿ, ಇವರು ವಾದಿಸಿದಂತೆ, ಬಂಧನಕ್ಕೆ ಕಳುಹಿಸಿದ ದಿನಾಂಕವು, ಈ ಸಂದರ್ಭಕ್ಕೆ ಸೇರಿಕೊಂಡಲ್ಲಿ, ದಿನಾಂಕ 11.8.2016ರಂದು ಆಪಾದಿತನಿಗೆ ಹಕ್ಕು ಕೂಡಿ ಬಂದಿದ್ದು, ಆದರೆ, ಜಾಮೀನಿಗೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 167(2)(ii) ಪ್ರಕರಣದಡಿಯಲ್ಲಿ ಉದ್ದೇಶಿಸಲಾದಂತೆ ತತ್‌ಕ್ಷಣ ತನ್ನ ಹಕ್ಕನ್ನು ಚಲಾಯಿಸಲಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದಡಿಯಲ್ಲಿ ಆಪಾದಿತನು ಸಲ್ಲಿಸಿದ ಅಂಥ ಅರ್ಜಿಯನ್ನು ಪರಿಗಣಿಸುವ ಮೊದಲೇ ಏಕಕಾಲಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 167(2)ಪ್ರಕರಣದಡಿಯಲ್ಲಿ ಅರ್ಜಿಯನ್ನು ಹಾಗೂ ಆರೋಪಪಟ್ಟಿಯನ್ನು ಸಲ್ಲಿಸಿರುವುದು ವಾಸ್ತವಾಂಶವಾಗಿರುತ್ತದೆ. ಆ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದಡಿಯಲ್ಲಿನ ಹಕ್ಕನ್ನು, ಆಪಾದಿತನು ಕಳೆದುಕೊಂಡಿರುತ್ತಾನೆ. ಹಾಗಾಗಿ, ಅಧೀನ ನ್ಯಾಯಾಲಯದ ಎದುರು ಮಂಡಿಸಿರುವ ವಾಸ್ತವಾಂಶದ ಮೇಲೆ ಅಂಥ ಅರ್ಜಿಯನ್ನು ಪರಿಗಣಿಸುವುದು ಮಾತ್ರವೇ ಅಧೀನ ನ್ಯಾಯಾಲಯಕ್ಕೆ ಉಳಿದಿರುವ ಏಕಮಾತ್ರ ಪರಿಹಾರ ಮಾರ್ಗವಾಗಿರುತ್ತದೆ. ಅಧೀನ ನ್ಯಾಯಾಲಯವು ಈ ಎಲ್ಲಾ ಆಯಾಮಗಳನ್ನು ಚರ್ಚಿಸದಿದ್ದಾಗ್ಯೂ, ಅರ್ಜಿದಾರನಿಗಾಗಲೀ ಅಥವಾ ಪ್ರತ್ಯರ್ಜಿದಾರನಿಗಾಗಲೀ ಅವರ ಹಕ್ಕುಗಳಿಗೆ ಬಾಧಕವಾಗುವುದಿಲ್ಲ.

13. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದ ಪರಂತುಕ-ಎ ಯಡಿಯಲ್ಲಿನ ಜಾಮೀನಿನ ಮೇಲಿನ ಬಿಡುಗಡೆಗೆ ಸಂಬಂಧಿಸಿದ ಆದೇಶವನ್ನು ಯುಕ್ತವಾಗಿ ದೋಷವಿರುವ ಆದೇಶವೆಂದು ಪರಿಭಾಷಿಸಬಹುದಾಗಿರುತ್ತದೆ. ಗೊತ್ತುಪಡಿಸಿದ ಶಾಸನಾತ್ಮಕ ಅವಧಿಯೊಳಗೆ ಆರೋಪಪಟ್ಟಿಯನ್ನು ಸಲ್ಲಿಸುವಲ್ಲಿನ

6. (2011) 10 ಎಸ್‌ಸಿಸಿ 445

ಪ್ರಾಸಿಕ್ಯೂಷನ್ ದೋಷದ ಮೇಲೆ ಜಾಮೀನು ನೀಡಿ ಆಪಾದಿತನನ್ನು ಬಿಡುಗಡೆ ಮಾಡುವುದು ವಾಸ್ತವವಾಗಿ ದೋಷಪೂರಿತವಾದುದೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ, ಆರೋಪ ಪಟ್ಟಿಯನ್ನು ಸಲ್ಲಿಸುವ ಮೊದಲು, ಜಾಮೀನು ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ, ಅದನ್ನು ನಿರ್ಧರಿಸಲಾಗದಿದ್ದಲ್ಲಿ ಹಾಗೂ ಈ ಮಧ್ಯೆ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಲ್ಲಿ, ಜಾಮೀನನ್ನು ತಪ್ಪಿತ ಖಂಡದಡಿಯಲ್ಲಿ ನೀಡಲಾಗುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 167(2) ಪ್ರಕರಣದಡಿಯಲ್ಲಿನ ಜಾಮೀನಿನ ಹಕ್ಕು, ಪರಂತುಕ –ಎ ಯು ತಪ್ಪಿತ ಹಕ್ಕಾಗಿದ್ದು, ಅದು ನಿರುಪಾಧಿಕವಾಗಿರುವುದಿಲ್ಲ. ಇದನ್ನು ಆರೋಪ ಪಟ್ಟಿಯನ್ನು ಸಲ್ಲಿಸುವುದಕ್ಕೆ ಮೊದಲು ಚಲಾಯಿಸಬಹುದಾಗಿರುತ್ತದೆ. ಆ ಕಾರಣ ಮಾತ್ರದಿಂದಲೇ ಆರೋಪ ಪಟ್ಟಿಯನ್ನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 167ನೇ ಪ್ರಕರಣದ (2)ನೇ ಉಪ–ಪ್ರಕರಣಕ್ಕೆ ಪರಂತುಕ–ಎ ಯಲ್ಲಿ ನಮೂದಿಸಿದ ಶಾಸನಾತ್ಮಕ ಅವಧಿಯ ತರುವಾಯ ಸಲ್ಲಿಸಲಾಗಿದ್ದು, ಆರೋಪ ಪಟ್ಟಿಯನ್ನು ಸಲ್ಲಿಸುವುದಕ್ಕೆ ಮೊದಲು ಜಾಮೀನಿನ ಮೇಲೆ ಆತನನ್ನು ಬಿಡುಗಡೆ ಮಾಡುವ ಆದೇಶ ಇರದಿರುವೆಡೆಯಲ್ಲಿ, ಸದರಿ ಪರಂತುಕದಡಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡುವ ಅಂಥ ಹಕ್ಕಿನ ಅನುಭೋಗವನ್ನು ಆಪಾದಿತನು ಮುಂದುವರಿಸುವಂತಿಲ್ಲ. ಈ ಹಿನ್ನಲೆಯಲ್ಲಿ, ಆಪಾದಿತ / ಅರ್ಜಿದಾರನ ವಾಸ್ತವಾಂಶಗಳನ್ನು ಪರಿಗಣಿಸಿದಲ್ಲಿ, ಬಂಧನಕ್ಕೆ ಕಳುಹಿಸಿದ ಮೊದಲ ದಿನದ ಸೇರ್ಪಡೆ ಮಾಡಿಯಾಗಲೀ ಅಥವಾ ಬಿಟ್ಟುಬಿಡುವಿಕೆಯಿಂದಾಗಲೀ ಆತ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಹಕ್ಕುಳ್ಳವನಾಗಿರುವುದಿಲ್ಲ.

14. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಅದರಲ್ಲೂ ಮೇಲೆ ಹೇಳಿದ ವಿಲಕ್ಷಣದ ಸಂದರ್ಭಗಳ ಹಿನ್ನಲೆಯಲ್ಲಿ ಆಪಾದಿತ–ಅರ್ಜಿದಾರನು, ಪ್ರಶ್ನಿತ ಆದೇಶವನ್ನು ರದ್ದುಪಡಿಸುವಂತಹ ಯಾವುದೇ ಆಧಾರಗಳನ್ನು ನಿರೂಪಿಸಿರುವುದಿಲ್ಲ. ತದನುಸಾರವಾಗಿ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ.